ಕಾಪು ಕ್ಷೇತ್ರದಲ್ಲಿ ಒಂದು ವಿದ್ಯುತ್ ಸಬ್ ಸ್ಟೇಷನ್ ಮಂಜೂರಾಗಿರುವುದು

೩೩೬ (೬೨೭) ಶ್ರೀ ವಂಸತ ವಿ. ಸಾಲಿಯಾನ (ಕಾಪು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ ಒಂದು ವಿದ್ಯುತ್ ಸಬ್ ಸ್ಟೇಷನ್ ಮಂಜೂರು ಆಗಿರುವುದು ನಿಜವೆ ?

ಆ) ಮಂಜೂರಾತಿ ನೀಡಿ ಎಷ್ಟು ಸಮಯವಾಯಿತು ?

ಇ) ಈ ಯೋಜನೆಯನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಇಲ್ಲ.

ಆ) 'ಅ'ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) 'ಅ'ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡದಲ್ಲಿ ಸ್ವಯಂ ಉದ್ಯೋಗದ ಬಗ್ಗೆ

೩೩೭ (೬೨೮) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೬–೮೭ ಹಾಗೂ ೧೯೮೭–೮೮ರಲ್ಲಿ ಎಷ್ಟು ಜನರು ಸ್ವಉದ್ಯೋಗದ ಸಲುವಾಗಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿರುವರು ?

ಆ) ಪ್ರತಿ ವರ್ಷ ಎಷ್ಟು ಜನರಿಗೆ ಸಾಲವನ್ನು ಕೊಡಲು ಆಯ್ಕೆ ಮಾಡಲಾಗಿದೆ ?

ಇ) ಈ ಆಯ್ಕೆ ಯಾವ ಆಧಾರದ ಮೇಲೆ ನಡೆಯುತ್ತದೆ ?

ಈ) ಅರ್ಹರಿಗೆ ಆಯ್ಕೆ ದೊರೆಯದೇ ಅನರ್ಹರಿಗೆ ಆಯ್ಕೆ ದೊರೆತು ಸಾಲಸಿಕ್ಕಿದ ಉದಾಹರಣೆಗಳಿಲ್ಲವೇ ? ಹಾಗಾಗದಂತೆ ಸೂಕ್ತ ಏರ್ಪಾಡುಗಳೇನಾದರೂ ಮಾಡಲಾಗುವುದೇ ?

ಉ) ಈ ವರ್ಷಗಳಲ್ಲಿ ಒಟ್ಟು ಕೊಟ್ಟಂತಹ ಸಾಲದ ಹಣವೆಷ್ಟು ?

ಶ್ರೀ ರಮೇಶ್ ಪಿ. ಜಿಗಜಿಣಗಿ (ಸಣ್ಣ ಪ್ರಮಾಣದ ಉದ್ಯಮಗಳ ಮತ್ತು ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗದ ಸಾಲದ ಸಲುವಾಗಿ ೧೯೮೬–೮೭ರಲ್ಲಿ ೩,೧೧೨ ಜನರು ಮತ್ತು ೧೯೮೭–೮೮ರಲ್ಲಿ ೨,೭೨೧ ಜನರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಆ) ೧೯೮೬–೮೭ನೇ ಸಾಲಿನಲ್ಲಿ ೯೦೮ ಜನರಿಗೆ ಮತ್ತು ೧೯೮೭–೮೮ರಲ್ಲಿ ೪೦೦ ಜನರಿಗೆ ಸಾಲವನ್ನು ಕೊಡಲು ಆಯ್ಕೆ ಮಾಡಲಾಗಿದೆ.

ಇ) ಟಾಸ್ಕ್ ಫೋರ್ಸ್ ಸಮಿತಿಯವರು ಈ ಕೆಳಕಂಡ ಅಂಶಗಳ ಆಧಾರದ ಮೇಲೆ ಅಭ್ಯರ್ಥಿಗಳ ಸಾಲದ ಅರ್ಜಿಗಳನ್ನು ಮಂಜೂರಾತಿಗಾಗಿ ಆಯ್ಕೆಮಾಡುತ್ತಾರೆ.

೧. ಅರ್ಜಿದಾರರು ಎಸ್ಎಸ್ಎಲ್ಸಿ ಅಥವಾ ಮೇಲ್ಪಟ್ಟು ವಿದ್ಯಾರ್ಹತೆ ಹೊಂದಿರಬೇಕು.

೨. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ರೂ. ೧೦,೦೦೦–೦೦ಗಳೊಳಗೆ ಇರಬೇಕು.